## ಇಲ್ಲಿಯವರೆಗೆ...



ಗುಲಾಬಳಿಗಾಗಿ ಹರಿಲಾಲ ಏನೂ ಮಾಡಿರಲಿಲ್ಲ. ಕಷ್ಟದ ಸಮಯದಲ್ಲಿ ಗುಲಾಬ ಬೆನ್ನುಲುಬಾಗಿ ನಿಂತಿದ್ದಳು. ಇದನ್ನು ಕಂಡ ಹರಿಲಾಲ ಆಕೆಗೆ ಮೈತುಂಬ ಬಂಗಾರ ಮಾಡಿಸಿ ಹಾಕಿಸುವುದಾಗಿ ಹೇಳುತ್ತಾನೆ. ಇದಕ್ಕೆ ಗುಲಾಬ, 'ನನಗೆ ಬಂಗಾರ ಬೆಳ್ಳಿ ಬೇಡ. ನೀವು ಸಂತೋಷವಾಗಿರಬೇಕು' ಎಂದು ಉದಾರತೆ ತೋರುತ್ತಾಳೆ. ಅಲ್ಲದೆ ತನ್ನ ತವರುಮನೆ ರಾಜಕೋಟದಿಂದ ಹರಿಲಾಲನಿಗೆ ಮೂರುಸಾವಿರ ರೂಪಾಯಿ ಕೊಡಿಸುತ್ತಾಳೆ. ಮಿಲ್ ಚೆನ್ನಾಗಿ ನಡೆದು ಬಡ್ಡಿಹಣವನ್ನು ರಾಜಕೋಟಕ್ಕೆ ಕಳಿಸುತ್ತಾನೆ ಹರಿಲಾಲ. ಆದರೆ ಕೆಲವೇ ದಿನಗಳಲ್ಲಿ ಪರಿಸ್ಥಿತಿ ಡೋಲಾಯಮಾನವಾಗಿ ಅಪಾರ ನಷ್ಟ ಉಂಟಾಗುತ್ತದೆ. ಒಬ್ಬ ಅಕ್ಕಸಾಲಿಗನ ಬಳಿ ಮೂರು ಸಾವಿರ ಸಾಲ ಪಡೆಯುತ್ತಾನೆ. ಕಷ್ಟನಷ್ಟ ಹೆಚ್ಚಾಗಿ ಸೆರೆಯ ದಾಸನಾಗುತ್ತಾನೆ. ಅಕ್ಕಸಾಲಿಗನ ಬಡ್ಡಿಹಣವನ್ನೂ ಕೊಡದೆ ವಂಚಿಸಿದ ವಿಚಾರ ಬಾಪೂಗೆ ತಿಳಿಯುತ್ತದೆ. ಇದರಿಂದ ವ್ಯಗ್ರರಾಗುತ್ತಾರೆ ಬಾಪೂ. ಜೊತೆಗೆ ಹರಿಲಾಲ ಬೀಗರ ಕಡೆಯಿಂದ ಪಡೆದ ಹಣವನ್ನು ಮರಳಿಸಬೇಕೆಂದು ಬಾಪೂಗೆ ಪತ್ರ ಬರುತ್ತದೆ. ಇದೂ ಕೂಡ ಬಾಪೂಗೆ ಹೊಸ ವಿಷಯವಾಗಿದ್ದು ಬೇಸರದಲ್ಲಿ ಮುಳುಗುತ್ತಾರೆ.

ಇತ್ತ ಸೇಠ್ ನರೋತ್ತಮದಾಸರಿಗೂ ಹರಿಲಾಲನ ಮೋಸ ತಿಳಿಯುತ್ತದೆ. ನರೋತ್ತಮದಾಸರಿಗೆ ಹರಿಲಾಲ ಮೂವತ್ತು ಸಾವಿರ ರೂಪಾಯಿಗಳ ಗೋಲ್‌ಮಾಲ್ ಮಾಡಿದ ವಿಷಯ ಬಾಪೂಗೂ ತಿಳಿಯುತ್ತದೆ. ನಂಬಿಕೆಗೆ ದ್ರೋಹ ಬಗೆದಂತಾಗುತ್ತದೆ. ಗುಲಾಬ ಹಾಗೂ ಮಕ್ಕಳನ್ನು ತವರಿಗೆ ಕಳಿಸುತ್ತಾನೆ ಹರಿಲಾಲ. ಒಬ್ಬಂಟಿಯಾದ ಮೇಲೆ ಕುಡಿತದ ಚಟ ವಿಪರೀತ ಹೆಚ್ಚಾಗುತ್ತದೆ. ಗುಲಾಬಳ ಆರೋಗ್ಯ ಹದಗೆಡುತ್ತದೆ. ಔಷಧಿ ಖರ್ಚಿಗೂ ಹರಿಲಾಲ ಹಣ ಕಳಿಸಲು ಆತನಲ್ಲಿ ಹಣವಿರುವುದಿಲ್ಲ. ಆದಾಯ ಬರುವ ಎಲ್ಲ ಬಾಗಿಲುಗಳೂ ಹರಿಲಾಲನ ಪಾಲಿಗೆ ಮುಚ್ಚಿ ಹೋಗುತ್ತದೆ. ಮುಂಬೈಯಲ್ಲಿ ವಾಸವಾಗಿರುವ ಹರಿಲಾಲನ ಮಾವ ಮಾಧವದಾಸರು ಹಣದಲ್ಲಿ ಅನುಕೂಲಸ್ಥರಾಗಿದ್ದರೂ ಹರಿಲಾಲ–ಬಾಪೂ ನಡುವಿನ ಭಿನ್ನಾಭಿಪ್ರಾಯ ತಿಳಿದಿರುವುದರಿಂದ ಹರಿಲಾಲನಿಗೆ ಹಣಕಾಸು ಸಹಾಯ ಮಾಡಲು ಮಾಧವದಾಸರು ಮುಂದೆ ಬರುವುದಿಲ್ಲ.

ವ್ಯಾಪಾರದಲ್ಲಿ ಮೂಲ ಹಣವೂ ಕೈಬಿಟ್ಟರೆ, ತುಂಬಾ ಸಮಸ್ಯೆಗಳನ್ನು ಎದುರಿಸಬೇಕಾಗುವುದು. ಇದನ್ನೆಲಾ ಯೋಚಿಸಿದ ಹರಿಲಾಲ, ಮಾಲಿಗೆ ಸಿಕ್ಕಷ್ಟು ಹಣವನ್ನು ತೆಗೆದುಕೊಂಡು ಮಾಲನ್ನು ಮಾರಬೇಕು ಎಂಬ ನಿರ್ಧಾರಕ್ಕೆ ಬಂದ.

ಆದರೆ ಹರಿಲಾಲನ ಅದೃಷ್ಟ ಅಷ್ಟು ಉತ್ತಮವಾಗಿರಲಿಲ್ಲ. ಮಾಲನ್ನು ಡಿಲಿವರಿ ಮಾಡಲು ಅವನು ಗೋದಾಮಿನ ಬಾಗಿಲನ್ನು ತೆರೆಯಿಸಿದಾಗ ಅವನಿಗೆ ಜೀವವೇ ಹೋದಂತಾಯಿತು. ಇಪ್ಪತ್ತೇಳು ಪೆಟ್ಟಿಗೆಗಳಲ್ಲಿ ಎರಡು ಪೆಟ್ಟಿಗೆಗಳು ಕಡಿಮೆಯಿದ್ದವು. ಆ ಪೆಟ್ಟಿಗೆಗಳ ಕಳ್ಳತನವಾಗಿತ್ತು. ಆ ಎರಡು ಪೆಟ್ಟಿಗೆಗಳ ಮಾಲಿನ ಬೆಲೆಯನ್ನು ಕಳೆದಾಗ ಮೂಲ ಬಂಡವಾಳ ಸಹ ವಸೂಲಾಗುತ್ತಿರಲಿಲ್ಲ.

ಹರಿಲಾಲ, ಪರಾಗರು ಮತ್ತು ಮಾವ ಮಾಧವದಾಸರಿಗೆ ಪೂರ್ಣ ವಿವರಗಳೊಂದಿಗೆ ಪತ್ರವನ್ನು ಬರೆದ. ಈ ಮೊದಲು ಸಹ ಮಾವ ಮಾಧವದಾಸರು ಇಂಥ ಮಾಲನ್ನು ಖರೀದಿಸಿ ಮಾರುವ ಒಳ್ಳೆಯ ವ್ಯಾಪಾರವನ್ನು ಮಾಡಿದ್ದರು. ಎಂದೂ ಮಾಲು ಹಗುರವಾಗಿರುವುದು ಅಥವಾ ಹಾಳಾದ ಬಗ್ಗೆ ದೂರು ಬಂದಿರಲಿಲ್ಲ. ಅಲ್ಲದೆ ಗೋದಾಮಿನಿಂದ ಎರಡು ಪೆಟ್ಟಿಗೆಗಳು ಮಾತ್ರ ಕಳುವಾಗಿರುವುದು ಅವರಿಗೆ ಅರ್ಥವಾಗುತ್ತಿರಲಿಲ್ಲ. ಕಳ್ಳ ಎರಡು ಪೆಟ್ಟಿಗೆಗಳನ್ನು ಮಾತ್ರ ಕದ್ದು, ಉಳಿದ ಇಪ್ಪತ್ತೈದು ಪೆಟ್ಟಿಗೆಗಳನ್ನು ಬಿಟ್ಟು ಹೋದದ್ದನ್ನು ಅವರ ಮನಸ್ಸು ನಂಬುತ್ತಿರಲಿಲ್ಲ. ಅಲ್ಲದೆ ಅವರು ಇದುವರೆಗೆ ಹರಿಲಾಲನ ಬಗ್ಗೆ ಕೇಳಿದ ವಿಷಯಗಳು ಸಹ ತೃಪ್ತಿದಾಯಕವಾಗಿರಲಿಲ್ಲ. ಅವರು ಹರಿಲಾಲನಿಗೆ ಸಹಾಯವನ್ನು ಮಾಡಲು ಬಯಸುತ್ತಿದ್ದರು, ಆದರೆ ಹರಿಲಾಲನೇ ತಮಗೆ ಮೋಸ ಮಾಡುತ್ತಿದ್ದಾನೆ; ಇದನ್ನು ಯೋಚಿಸಿ ಅವರ ಮನಸ್ಸಿಗೆ ಬೇಸರವಾಯಿತು. ಹರಿಲಾಲ ವ್ಯಾಪಾರವನ್ನು ಮಾಡದೆ ಮೋಸವೆಸಗುತ್ತಿದ್ದಾನೆ. ಹರಿಲಾಲನ ಈ ಮೋಸದ ಬಲೆಯಲ್ಲಿ ಪರಾಗರು ಸಹ ಶಾಮೀಲಾಗಿರಬಹುದೆಂದು ಯೋಚಿಸಿ ಅವರು ಪರಾಗರೆದುರು ತಮ್ಮ ಅಳಲನ್ನು ತೋಡಿಕೊಂಡರು.

'ಹರಿಲಾಲನ ಕಾರ್ಯ ವೈಖರಿಯನ್ನು ನೋಡಿದರೆ, ನಾನು ಈ ವಿಷಯದಲ್ಲಿ ಅವನನ್ನು ನಿರ್ದೋಷಿಯೆಂದು ಒಪ್ಪಲಾರೆ.' ಮಾಧವದಾಸರು ರೇಗುತ್ತಾ ಹೇಳಿದರು, 'ನಾನಿಲ್ಲೇ ಇದ್ದುಕೊಂಡು ನಿಮ್ಮ ಸರಕಿಗಾಗಿ ನನ್ನಿಂದೇನು ಸಾಧ್ಯವಿತ್ತೋ, ಅದನ್ನೆಲ್ಲಾ ಮಾಡಿದೆ. ಆದರೆ ನೀವು ನನಗೆ ಮೋಸ ಮಾಡಿದಿರಿ. ಹರಿಲಾಲನ ವಿಷಯದಲ್ಲಿ ನೀವೇ ನನಗೆ ದಾರಿಯನ್ನು ತಪ್ಪಿಸಿದಿರಿ...'

'ಮಾಧವದಾಸರೇ, ತಪ್ಪು ನಿಮ್ಮಿಂದಲೇ ಆಗಿದೆ' ಪರಾಗರು ಹರಿಲಾಲನ ಪರ ವಹಿಸಿದರು. 'ಹೀಗೆ ಸುಳ್ಳು ಆರೋಪವನ್ನು ಹೊರಿಸುವುದಕ್ಕೆ ಮೊದಲು ನೀವೇ ಎಲ್ಲಾ ಸಂಗತಿಗಳನ್ನು ಪರೀಕ್ಷಿಸಿಕೊಳ್ಳಬೇಕಿತ್ತು.'

'ಈಗ ನನಗೆ ಅದನ್ನೆಲ್ಲಾ ಹೇಳಬೇಡಿ, ನನಗೆ ನನ್ನ ಹಣ ವಾಪಸ್ ಬೇಕು, 'ಸತ್ಯಾಗ್ರಹಿ ಬ್ರದರ್ಸ್'ನಲ್ಲಿ ನೀವೂ ಪಾಲುದಾರರು' ಮಾಧವದಾಸರು ಎತ್ತರದ ಧ್ವನಿಯಲ್ಲಿ ಹೇಳಿದರು, 'ನೀವಿಬ್ಬರೂ ಇದಕ್ಕೆ ಉತ್ತರಿಸಲು ಹೊಣೆಗಾರರಾಗಿದ್ದೀರ.'

'ಮಾಧವದಾಸರೇ, ನೀವು ಚಿಂತಿಸಬೇಡಿ.' ಪರಾಗರು ಅವರನ್ನು ಶಾಂತಗೊಳಿಸಲು ಮೆಲ್ಲನೆ ಹೇಳಿದರು, 'ನಾನು ನಿಮ್ಮ ಸಂಪೂರ್ಣ ಹಣವನ್ನು ಮರಳಿ ಕೊಡಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇನೆ, ಆದರೆ ಈ ಮಾತಿನ ಬಗ್ಗೆ ಹೆಚ್ಚು ಚರ್ಚೆಯಾದರೆ, ಬಾ ಮತ್ತು ಬಾಪೂ ಅವರಿಗೆ ತುಂಬಾ ಆಘಾತವಾಗುವುದು.'

'ಪರಾಗರೇ, ನೀವು ನಿಜವನ್ನೇ ಹೇಳುತ್ತಿದ್ದೀರ' ಮಾಧವದಾಸರು ಮತ್ತೂ ರೇಗಿದರು, 'ನನಗೆ ಮೋಸ ಅಂದರೆ ತುಂಬಾ ಸಿಟ್ಟು ಬರುತ್ತದೆ. ನಾನದನ್ನು ತುಂಬಾ ಜಿಗುಪ್ಸೆಯಿಂದ ನೋಡುತ್ತೇನೆ. ಹರಿಲಾಲ ನನಗೆ ಮೋಸ ಮಾಡಿದ್ದಾನೆ. ನಾನು ಅವನ ವಿರುದ್ಧವಾಗಿ ಕೋರ್ಟ್‌ನ ಮೆಟ್ಟಿಲನ್ನು ಹತ್ತಲೂ ಸಹ ಹಿಂಜರಿಯುವುದಿಲ್ಲ. ಅಗತ್ಯ ಕಂಡು ಬಂದರೆ ಬಾಪೂ ಅವರಲ್ಲಿ ಸಹ ನ್ಯಾಯವನ್ನು ಯಾಚಿಸುತ್ತೇನೆ. ಒಂದು ವೇಳೆ ನಿಮಗೆ ಬಾಪೂ ಬಗ್ಗೆ ಇಷ್ಟು ಭಯವಿದ್ದರೆ, ನನ್ನ ಹಣವನ್ನು ಮರಳಿ ಕೊಡುವಂತೆ ಹರಿಲಾಲನಿಗೆ ಪತ್ರವನ್ನು ಬರೆಯಿರಿ.'

'ಬರೆಯುತ್ತೇನೆ ಬರೆಯುತ್ತೇನೆ, ಸೇಠ್‌ಜೀ! ಆದರೆ ಯಾವುದೇ ಕಠಿಣ ನಿರ್ಧಾರ ಕೈಗೊಳ್ಳುವುದಕ್ಕೂ ಮೊದಲು ಎರಡು ಸಲ ಖಂಡಿತ ಯೋಚಿಸಿ. ಎಷ್ಟಾದರು 'ಸತ್ಯಾಗ್ರಹಿ ಬ್ರದರ್ಸ್' ನಿಮ್ಮ ಸೋದರಳಿಯನ ಸರಕೇ ಆಗಿದೆ.'

'ಸರಕು ನನ್ನ ಸೋದರಳಿಯನಿಗೆ ಮಾತ್ರ ಸೇರಿದ್ದಲ್ಲ, ಅದು ನಿಮಗೂ ಸಹ ಸೇರಿದೆ'

ಇಬ್ಬರ ನಡುವೆ ನಡೆದ ಈ ಚರ್ಚೆಯನ್ನು ಪರಾಗರು ಹರಿಲಾಲನಿಗೆ ಬರೆದರು. ಮಾವ ಮಾಧವದಾಸರು ತನ್ನನ್ನು ನಂಬಿಲ್ಲ ಎಂಬುದನ್ನು ತಿಳಿದು ಹರಿಲಾಲ ಬೆಂಕಿಯಾದ. ಮಾವನವರು ವಹಿವಾಟು ಮಾಡಲೋಸುಗವೇ ವ್ಯಾಪಾರಕ್ಕಿಳಿದಿದ್ದರು. ವ್ಯಾಪಾರದಲ್ಲಿ ಸದಾ ಲಾಭವೇ ಆಗುವುದು ಹೇಗೆ ಸಾಧ್ಯ? ಒಂದು ವೇಳೆ ಮಾಲು ಹಗುರವಾದರೆ ಅದರಲ್ಲಿ ತನ್ನ ತಪ್ಪೇನಿದೆ? ತನ್ನ ದುರದೃಷ್ಟದಿಂದ ಮಾಲು ಸಹ ಕಳ್ಳತನವಾಯಿತು. ಬಜಾರಿನಲ್ಲಿ ಬೆಲೆಯ